ಹೆಂಡತಿಯ ಮುಖನೋಡಿದ. ಅನಂತರ ದೇಶಾವರಿ ನಗೆ ನಗುತ್ತಾ, 'ಕಳೆದ ಬಾರಿ ನೋಡಿದ್ದಕ್ಕಿಂತ ಈಗ ಸ್ವಲ್ಪ' ಎಂದು ತಮ್ಮ ಎರಡು ಕೈಗಳನ್ನು ಪಕ್ಕಕ್ಕೆ ಇರುಕಿಕೊಂಡರು. ಅವರ ಹೆಂಡತಿಗೆ ತಾವು ತಂದ ದೊಡ್ಡ ಅಳತೆಯ ಅಂಗಿಯ ಸುಳಿವು ಸಿಕ್ಕಿಬಿಟ್ಟಿತ್ತು. ತಕ್ಷಣವೇ 'ಹೌದು, ಹೌದು' ಎಂದು ಗಂಡನಿಗೆ ಒತ್ತಾಸೆಯಾಗಿ ದನಿಗೂಡಿಸಿದರು.

ಅವರ ಮಾತುಗಳನ್ನು ಕೇಳಿ ಇವನಿಗೋ ಬಹಳ ಖುಷಿ. ತಾನು ಎಂದೂ ಮಾಡದ ವ್ಯಾಯಾಮವನ್ನು, ಯಾವತ್ತೂ ಹೋಗದ ವಾಯುವಿಹಾರವನ್ನು ನೆನಪಿಸಿಕೊಂಡು, 'ಹೌದು, ಪರವಾಗಿಲ್ಲ ಕಂಡುಹಿಡಿದುಬಿಟ್ಟಿರಿ!' ಎಂದು ತನ್ನ ದೇಶಾವರಿ ನಗೆಯನ್ನು ಅವರದ್ದರೊಡನೆ ಸೇರಿಸಿಬಿಟ್ಟ. ಒಟ್ಟಿನಲ್ಲಿ ನಾವು ಕಲ್ಪಿಸಿಕೊಳ್ಳುವ ವ್ಯಕ್ತಿಗಳು 'ಭಾರಿ ಆಸಾಮಿ'ಗಳೆ ಆಗಿರುತ್ತಾರೆ!

'ಅಮ್ಮ, ಈಗ ಬೆಳಗ್ಗೆ ಒಂಬತ್ತೂವರೆ ಆಗಿ ಹೋಗಿದೆ. ನಾನು ನಾಳೆ ಸ್ಕೂಲಲ್ಲಿ ಎಂಟೂಕಾಲಿಗೆ ಇರಬೇಕು. ಇಷ್ಟು ಲೇಟಾಗಿ ಎದ್ದರೆ?' ಮಗ ತಳಮಳಗೊಂಡು ಕೇಳಿದ್ದ. ಬೇಸಿಗೆಯ ರಜೆಯಲ್ಲಿ ಬೆಳಗ್ಗೆ ನಿಧಾನಕ್ಕೆ ಎದ್ದರೆ ತನ್ನ ಕೆಲಸಗಳನ್ನು ಮಾಡಿ ಮುಗಿಸುವುದಕ್ಕೆ ಅನುಕೂಲವಾಗುತ್ತದೆ ಎಂದು, ಅವನಿಗೆ ಒಂಬತ್ತು ಗಂಟೆಯವರೆಗೆ ಮಲಗಿರುವುದನ್ನು ಅಭ್ಯಾಸ ಮಾಡಿಸಿಬಿಟ್ಟಿದ್ದಳು.

'ನಾನು ಬೇಗ ಏಳ್ತೀನಿ ಮರಿ. ನಿನ್ನ ಸರಿಯಾದ ಸಮಯಕ್ಕೆ ಎಬ್ಬಿಸ್ತೀನಿ. ಇಷ್ಟು ವರ್ಷ ನಿನ್ನ ಎಬ್ಬಿಸಿ ಸ್ಕೂಲಿನ ಬಸ್ ಬರುವ ಹೊತ್ತಿಗೆ, ಯೂನಿಫಾರಂ ಹಾಕಿ ರೆಡಿ ಮಾಡಿಸ್ತಿದ್ನೋ ಇಲ್ವೋ? ಹಾಗೆ ನಾಳೇನು ನೀನು ರೆಡಿಯಾಗಿರ್ತಿ' ಎಂದು ಅವನ ತಲೆಯನ್ನು ಸವರುತ್ತಾ ಸಮಾಧಾನ ಹೇಳಿದಳು.

ಆದರೆ ಮಗನ ಆತಂಕ ಅವನಿಗೆ. ತನ್ನ ತಲೆಯನ್ನು ಅಲ್ಲಾಡಿಸುತ್ತ 'ಅಮ್ಮಾ, ಆದರೂ ಹೋದವಾರ, ರಾತ್ರಿ ಕ್ರಿಕೆಟ್ ಮ್ಯಾಚ್ ನೋಡ್ತಾ ಇದ್ಯಲ್ಲ, ಅದಕ್ಕೆ ತಾನೆ ಮಾರನೆಯ ದಿನ ಲೇಟಾಗಿ ಎದ್ದಿದ್ದು ಅಂತ ನೀನೇ ಹೇಳಿದ್ಯಲ್ಲ.'

'ಸರಿ, ನಾನು ಮೊಬೈಲ್‌ನಲ್ಲಿ ಅಲಾರಂ ಇಡ್ತೀನಿ.'

'ಮೊಬೈಲ್ ನಂಗೇ ಕೊಡ್ತೀಯಾ?'

ತಾಯಿಗೆ ಈಗ ಪೀಕಲಾಟ ಶುರುವಾಯಿತು. ಮಗನಿಗೆ ಮೊಬೈಲ್ ಕೊಟ್ಟು, ಅವನು ರಾತ್ರಿಯೆಲ್ಲ ಎದ್ದು ವಿಡಿಯೊ ನೋಡ್ತಾ ಇದ್ದರೆ; ಇಲ್ಲ ಆಟ ಆಡ್ತಾ ಇದ್ದರೆ ಏನು ಮಾಡುವುದು? ತಕ್ಷಣ ಅವಳಿಗೆ ಹೊಳೆದದ್ದು ಅವಳ ಮದುವೆಯಲ್ಲಿ ಯಾರೋ ಬಳುವಳಿ ಕೊಟ್ಟಿದ್ದ ಅಲಾರಂ ಟೈಮ್‌ಪೀಸ್. ಮೊನ್ನೆತಾನೆ ಉಪಯೋಗಕ್ಕೆ ಬಾರದ ವಸ್ತುಗಳ ಜೊತೆ ಅದನ್ನು ಎಸೆಯಲು ತೆಗೆದಿಟ್ಟಿದ್ದು ನೆನಪಿಗೆ ಬಂತು. ಅದಕ್ಕೆ ಹೊಸ ಬ್ಯಾಟರಿ ಹಾಕಿ, ಸಮಯವನ್ನು ಹೊಂದಿಸಿಟ್ಟಳು. ಮಗನಿಗೆ ಅದರಿಂದ ಒಮ್ಮೆ ಅಲಾರಂ ಗಂಟೆ ಹೊಡಿಸಿ ತೋರಿಸಿದಳು. ಇದನ್ನು ಕಂಡು, ತನ್ನ ತಾಯಿಯ ಸಮಯಸ್ಫೂರ್ತಿಯಿಂದ, ಅವಳಿಗೆ ತನ್ನ ಮೇಲಿರುವ ಕಾಳಜಿಯಿಂದ ಅವನ ಮುಖ ಅರಳಿತು.

'ಇದನ್ನು ಮೇಜಿನ ಮೇಲೆ ಇಟ್ಟು ನಿದ್ದೆ ಮಾಡು, ನಾಳೆ ಬೆಳಿಗ್ಗೆ ಆರೂವರೆಗೆ ಅದು ಗಂಟೆ ಹೊಡೆದಾಗ ಏಳಲು ಅನುಕೂಲವಾಗುತ್ತದೆ. ಅದನ್ನು ಅಭ್ಯಾಸ ಮಾಡಿಕೋ. ಶಾಲೆಗೆ ಸಮಯಕ್ಕೆ ಸರಿಯಾಗಿ ನೀನೇ ತಯಾರಾಗಿ ಹೋಗಬಹುದು. ಈಗ ದೊಡ್ಡ ತರಗತಿಗೆ ಬಂದಿದೀಯಲ್ಲ' ಎಂದು ಅದನ್ನು ಮಗನಿಗೆ ಕೊಟ್ಟಳು. 'ಇನ್ನು ಮುಂದೆ ತನ್ನ ಮಗನು ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದಾದ ಯಾವ ಸಂದರ್ಭವನ್ನು ವ್ಯರ್ಥಗೊಳಿಸಬಾರದು' ಎಂಬುದು ಅವಳ ಹಗಲುಗನಸು ಪ್ರೇರಿತ ನಿರ್ಣಯಗಳಲ್ಲಿ ಒಂದು.

ಅವನು ದಿನದಲ್ಲಿ ಹತ್ತು ಹನ್ನೆರಡು ಬಾರಿ ಅಲಾರಂ ಗಂಟೆ ಹೊಡೆಸಿ, ಹೊಸ ಆಟದ ಸಾಮಾನು ಸಿಕ್ಕಿದವನಂತೆ ಸಂತೋಷಪಟ್ಟಿದ್ದ. ರಾತ್ರಿ ಅದನ್ನು ತನ್ನ ಮೇಜಿನ ಮೇಲೆ ಇಟ್ಟು ಮಲಗಿದ. ತಾಯಿಯು ಮಲಗುವ ಮೊದಲು ಗಡಿಯಾರದ ಸಮಯ ಸರಿಯಾಗಿದೆಯೆ, ಅಲಾರಂ ಗಂಟೆಯ ಸಮಯ ಸರಿಯಾಗಿದೆಯೆ, ಗಂಟೆ ಹೊಡೆಯುವುದನ್ನು ನಿಲ್ಲಿಸುವ ಗುಂಡಿ ಮೇಲಕ್ಕೆ ಬಂದಿದೆಯೆ ಎಂದು ಪರಿಶೀಲಿಸಿ ತಾನೂ ಮಲಗಿದಳು. ಅಂದು ಬಹಳ ಆಯಾಸವಾಗಿದ್ದರಿಂದ ಅವಳಿಗೆ ಬೇಗ ನಿದ್ದೆ ಬಂದುಬಿಟ್ಟಿತು.

ಇನ್ನೂ ಕತ್ತಲೆ ಕತ್ತಲೆಯಾಗಿರುವಾಗ ಮಗ 'ಅಮ್ಮ ಅಮ್ಮ' ಎಂದು ಮೆಲ್ಲಗೆ ಕರೆಯುವುದು ಕೇಳಿ, ತಟ್ಟನೆ ಎದ್ದು ಕುಳಿತು ಮೊಬೈಲ್ ನೋಡಿದಳು. ಇನ್ನೂ ಬೆಳಗಿನ ಜಾವ ಐದೂವರೆ ಗಂಟೆ. 'ಯಾಕೋ ಇಷ್ಟು ಬೇಗ ಎದ್ದೆ. ಹೋಗಿ ಮಲಗಿಕೋ' ಎಂದು ತಾನು ಹಾಸಿಗೆ ಮೇಲೆ ಉರುಳಿದಳು.

'ಅಮ್ಮ ಆರೂವರೆಗೆ ಅಲಾರಾಂ ಹೊಡೆಯುತ್ತಲ್ವಾ?' ಎಂದು ಮಗರಾಯ ಕೇಳಿದ. ಈ ಸಂದೇಹ ಅವನ ನಿದ್ದೆಯನ್ನು ಮೀರಿ ಬೆಳೆದುಬಿಟ್ಟಿತ್ತು. ಅದನ್ನು ಕೇಳಿ, ತನಗೆ ಬಂದ ಕೋಪವನ್ನು ತಡೆದುಕೊಂಡು, ಶಾಲೆಯ ಮೊದಲ ದಿನ

